## ರೀಡರ್ 'ಫೀಡ್ಲಿ'

ಇತ್ತೀಚೆಗಷ್ಟೇ ಆ್ಯಂಡ್ರಾಯ್ಡ್ ಮೊಬೈಲ್ ತೆಗೆದುಕೊಂಡಿದ್ದೀರಾ? ಹಾಗಾದರೆ ಗೂಗ್ಲ್ ಪ್ಲೇ ನೀಡಿರುವ ಆಕರ್ಷಕ ಅಪ್ಲಿಕೇಶನ್‌ಗಳನ್ನು ತಿಳಿದುಕೊಳ್ಳುವುದು ಸೂಕ್ತ. ಅವುಗಳಲ್ಲಿ ಉಚಿತ 'ಫೀಡ್ಲಿ' ಅಪ್ಲಿಕೇಶನ್ ಅನ್ನು ಗೂಗ್ಲ್ ರೀಡರ್ ಬದಲಾಗಿ ಬಳಸಬಹುದು. ಇದು ಕಣ್ಣಿಗೆ ಅಪ್ಯಾಯಮಾನ. ದೊಡ್ಡ ದೊಡ್ಡ ಇಮೇಜ್‌ಗಳು, ನಿಯತಕಾಲಿಕದ ಶೈಲಿಯ ಲೇಔಟ್‌ನಿಂದ ಗಮನ ಸೆಳೆಯುತ್ತದೆ. ಇದರ ಜೊತೆ ಬುಕ್‌ಮಾರ್ಕಿಂಗ್‌ಗೆ 'ಪೊಕೆಟ್' ಕೂಡಾ ಲಭ್ಯ. ನಿಮಗೆ ಪ್ರಯೋಜನವಾಗುವ ವಿವಿಧ ವೆಬ್ ಸೈಟ್‌ಗಳ ಮಾಹಿತಿಯನ್ನೂ ನೀಡುತ್ತದೆ. ಒಂದೇ ಒಂದು ಟ್ಯಾಪ್ ಮೂಲಕ ಅವುಗಳಿಗೆ ಚಂದಾದಾರರಾಗಬಹುದು.

## ಫೋಟೊ 'ಕ್ಯಾಪ್ಚರ್'




ವಿಡಿಯೋದಿಂದ ಫೋಟೋವನ್ನು ಪ್ರತ್ಯೇಕಿಸುವುದು ಕ್ಲಿಷ್ಟಕರ. ಹೀಗಾಗಿ ಗೂಗ್ಲ್+ ಹ್ಯಾಂಗ್ ಔಟ್ (ಸಾಮಾಜಿಕ ಜಾಲತಾಣದ)ನ ಗ್ರೂಪ್ ವಿಡಿಯೋ ಚ್ಯಾಟ್‌ನಲ್ಲಿ ಭಾಗವಹಿಸಿದವರಿಗೆ ತಮ್ಮ ಫೋಟೋವನ್ನು ಪ್ರತ್ಯೇಕವಾಗಿ ಸಂಗ್ರಹಿಸಿಟ್ಟುಕೊಳ್ಳಲು ಈಗ 'ಕ್ಯಾಪ್ಚರ್' ಎಂಬ ಅಪ್ಲಿಕೇಶನ್ ಬಂದಿದೆ. ಗೂಗ್ಲ್+ ಹ್ಯಾಂಗ್‌ಔಟ್‌ಗೆ ಈ ಅಪ್ಲಿಕೇಶನ್ ಕ್ಯಾಮೆರಾ ಬಟನ್ ಒದಗಿಸುತ್ತದೆ. ನೀವು ವಿಡಿಯೋ ಚ್ಯಾಟ್‌ನಲ್ಲಿದ್ದಾಗಲೇ ಈ ಬಟನ್ ಒತ್ತಿದರೆ ಸಾಕು, ಉತ್ತಮ ಗುಣಮಟ್ಟದ ಫೋಟೊಗಳು ಲಭ್ಯ. ಇವನ್ನು ಆಲ್ಬಂಗೆ ಸೇರಿಸಿಕೊಳ್ಳಬಹುದು. ಜೊತೆಗೆ ಚ್ಯಾಟ್‌ನ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು.

## ಫೈರ್‌ಫಾಕ್ಸ್ ಒಎಸ್ ಸಿಮ್ಯುಲೇಟರ್ 3.0

ಇದು ಮೊಝಿಲ್ಲಾದ ಮೊಬೈಲ್ ಆಪರೇಟಿಂಗ್ ವ್ಯವಸ್ಥೆ. ವಿಂಡೋಸ್, ಲಿನುಕ್ಸ್, ಒಎಸ್ ಎಕ್ಸ್ ಅಲ್ಲದೇ ಫೈರ್‌ಫಾಕ್ಸ್ ಬ್ರೌಸರ್‌ನಲ್ಲಿ ಕೂಡಾ ಲಭ್ಯ. ಇದರಲ್ಲಿ 'ಪುಶ್ ಟು ಡಿವೈಸ್' ವ್ಯವಸ್ಥೆಯಿದೆ. ಅಂದರೆ ಯಾವುದೇ ಅಪ್ಲಿಕೇಶನ್ ಅನ್ನು ಒಂದು ಫೈರ್‌ಫಾಕ್ಸ್ ಒಎಸ್ ಡಿವೈಸ್‌ನಲ್ಲಿ ಅಳವಡಿಸಿದರೆ ಯುಎಸ್‌ಬಿ ಸಂಪರ್ಕದ ಮೂಲಕ ಇನ್ನೊಂದು ಡಿವೈಸ್‌ಗೆ ಆಟೋಮ್ಯಾಟಿಕ್ ಆಗಿ ಅಳವಡಿಸಬಹುದು.

ಈ ಸಿಮ್ಯುಲೇಟರ್‌ನಲ್ಲಿ ಜಿಯೋಲೋಕೇಶನ್ ಎಪಿಐ ಲಭ್ಯವಿದೆ. ಈ ಸಿಮ್ಯುಲೇಟರ್ ಅನ್ನು ಮೊಝಿಲ್ಲಾ ಎಫ್‌ಟಿಪಿ ಸರ್ವರ್ ಮೂಲಕ ಆರ್2ಡಿ2ಬಿ2ಜಿ ಹೆಸರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಳವಡಿಸಿದ ನಂತರ ಬ್ರೌಸರ್‌ನಲ್ಲಿರುವ ವೆಬ್ ಡೆವಲಪರ್ ಮೆನು ಮೂಲಕ ಬಳಸಬಹುದು.






## ಕ್ರೋಮ್ ಅಪ್ಲಿಕೇಶನ್ ಲಾಂಚರ್

ಗೂಗ್ಲ್‌ನ ಈ ಅಪ್ಲಿಕೇಶನ್ ಸದ್ಯ ವಿಂಡೋಸ್‌ನಲ್ಲಿ ಲಭ್ಯ. ಇದು ಬಳಕೆದಾರರ ಎಲ್ಲಾ ವೆಬ್ ಆಧಾರಿತ ಅಪ್ಲಿಕೇಶನ್‌ಗಳನ್ನು ಒಳಗೊಂಡಿರುತ್ತದೆ. ಅಂದರೆ ಒಂದೇ ಕಡೆ ಈ ಅಪ್ಲಿಕೇಶನ್‌ಗಳನ್ನು ತೆರೆಯಬಹುದು. ಬ್ರೌಸರ್ ಹೊರತಾಗಿಯೂ ತೆರೆಯಬಹುದು. ಈ ಅಪ್ಲಿಕೇಶನ್‌ಗಳನ್ನು ಎಚ್‌ಟಿಎಂಎಲ್, ಜಾವಾಸ್ಕ್ರಿಪ್ಟ್ ಮತ್ತು ಸಿಎಸ್ ಎಸ್‌ನಲ್ಲಿ ಬರೆಯಲಾಗಿದ್ದು ಆಫ್‌ಲೈನ್ ಇದ್ದಾಗಲೂ ತೆರೆಯಬಹುದು.

ಈ ಅಪ್ಲಿಕೇಶನ್ ಲಾಂಚರ್‌ನ ಐಕಾನ್ ವಿಂಡೋಸ್ ಟಾಸ್ಕ್‌ಬಾರ್ ಮೇಲೆ ಕಾಣಿಸಿಕೊಳ್ಳುತ್ತದೆ. ಆದರೆ ಅದು ಕಾರ್ಯ ನಿರ್ವಹಿಸುವಂತಾಗಲು ಬಳಕೆದಾರರು ಕ್ರೋಮ್ ಆಧಾರಿತ ಅಪ್ಲಿಕೇಶನ್ ಅಳವಡಿಸಿಕೊಳ್ಳಬೇಕು.

■ ಎಸ್. ತುಂಬೆ